2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ. ಸಿ. ನಂ.:1136/2020**

ಆರೋಪಿಯ ಹೆಸರು ಹರಿಕುಮಾರ್ ಎಸ್ ಎಎನ್ ಬಿನ್ ನಾಗರಾಜು, 32 ವರ್ಷ,

ವಾಸ್ತವ್ಯ ನಂ:335, ಸಿಂಧುವಳ್ಳಿ ಗ್ರಾಮ, ಕಸಬಾ ಹೋಬಳಿ, ನಂಜನಗೂಡು ತಾಲ್ಲೂಕು.

ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

ಪ್ರಶ್ನೆ 1: ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ :

ಪ್ರಶ್ನೆ 2: ಫ್ರಾಸಾ-1 ಎನ್ ಎಂ ಜೀವನ್ ಕುಮಾರ್, ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಫ್ರಾಸಾ-1 ರವರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಕುಟುಂಬದ ಅವಶ್ಯಕತೆಗಾಗಿ ಅಂದರೆ ಮೊಬೈಲ್ ಫೋನ್ ವ್ಯಾಪಾರಕ್ಕಾಗಿ ಮತ್ತು ಇತರೆ ಅವಶ್ಯಕತೆಗಳಿಗಾಗಿ ಹಣದ ಅವಶ್ಯಕತೆಯಿದೆ ಎಂದು ಫಿರ್ಯಾದುದಾರರಿಂದ 2020 ನೇ ಇಸವಿ ಜನವರಿ ಮಾಹೆಯಲ್ಲಿ ಭೇಟಿ ಮಾಡಿ ರೂ.1,00,000/- ಗಳನ್ನು ಸಾಲವಾಗಿ ನೀಡುವಂತೆ ಬೇಡಿಕೆ ಇಟ್ಟಿದ್ದು, ಫಿರ್ಯಾದುದಾರರಿಂದ ಆರೋಪಿಯಾದ ನೀವು ರೂ.90,000/- ಪಡೆದುಕೊಂಡು, ಸದರಿ ಸಾಲವನ್ನು 2020 ನೇ ಇಸವಿ ಮಾರ್ಚ್ ಮಾಹೆಯಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ 3 ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನಿಮ್ಮ ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡಾ, ನಂಜನಗೂಡು ಶಾಖೆಯ ಚೆಕ್ ನಂ:000055 ನ್ನು ರೂ.90,000/-ಗಳಿಗೆ ದಿ:19.03.2020 ಎಂದು ನಮೂದಿಸಿ ಫ್ರಾಸಾ-1 ರವರಿಗೆ ನೀಡಿದ್ದು ಸದರಿ ಚೆಕ್ಕನ್ನು ಫ್ರಾಸಾ-1 ರವರು ನಗದೀಕರಣ ಪಡಿಸಲು ತಮ್ಮ ಖಾತೆಯಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ನಂಜನಗೂಡು ಶಾಖೆಗೆ ಹಾಜರುಪಡಿಸಿದಾಗ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ದಿ:23.03.2020 ರಂದು ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:

ಪ್ರಶ್ನೆ 4 ಫ್ರಾಸಾ-1 ರವರು ಮುಂದುವರೆದು ಅವರ ಪರ ವಕೀಲರ ಮೂಲಕ

ದಿಃ13.06.2020 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸ್ ಜಾರಿಯಾಗಿದ್ದು, ಆರೋಪಿಯಾದ ನೀವು ಸದರಿ ನೋಟೀಸ್ ಜವಾಬನ್ನು ನೀಡಿರುವುದಿಲ್ಲ ಹಾಗೂ ಸಾಲದ ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

ಪ್ರಶ್ನೆ 5 ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ 6ಃ ನಿಮ್ಮ ಪರ ಏನಾದರೂ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ ಃ

**ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ06.10.2022 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.**

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು